2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ**115/2018**

| | | | |
|---|---|---|---|
| ಸಾಕ್ಷಿದಾರರ ಹೆಸರು | - ಮೊಹಮದ್ ಇಸಾಕ್ | | ಪಿಡಬ್ಲೂ - 9 |
| ತಂದೆಯ ಹೆಸರು | - ಸಿ.ಬಿ. ಬಾಷ | | ಸಿಡಬ್ಲೂ - 3 |
| ವಯಸ್ಸು | - 54 ವರ್ಷ | | |
| ಉದ್ಯೋಗ | - ವ್ಯವಸಾಯ | | |
| ವಾಸ ಸ್ಥಳ | - ಟಿಪ್ಪುನಗರ, ಚಿಕ್ಕಮಗಳೂರು | | |

ದಿನಾಂಕಃ 20-04-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ಪಿ.ಪಿ. ರವರಿಂದ -

1. ನನಗೆ ಸಹಿ ಮಾಡಲು ಬರುತ್ತದೆ. ನನ್ನ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಈಗ ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು, ಅದರ ಮೇಲೆ ಇರುವ ತನ್ನ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಯು ಪೊಲೀಸರು ಮಹಜರ್ ಗಾಗಿ ಬರಲು ನೀಡಿದ ನೋಟೀಸು ಆಗಿದ್ದು, ಅದನ್ನು ನಿ.ಪಿ.16 ಎಂದು ಗುರುತಿಸಲಾಯಿತು ಮತ್ತು ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿ.ಪಿ.16(ಎ) ಎಂದು ಗುರುತಿಸಲಾಯಿತು. ನಾನು ಜಮೀನು ಕೆಲಸ ಮುಗಿಸಿಕೊಂಡು ನಮ್ಮ ಮನೆಗೆ ಬರುತ್ತಿದ್ದಾಗ, ಆಗ ಪೊಲೀಸರು ರಾಜೇಗೌಡರ ಮಗಳ ಗಲಾಟೆಯ ವಿಚಾರವಾಗಿ ಅವರ ಮನೆಯ ಹತ್ತಿರ ಸದರಿ ಸಹಿಯನ್ನು ನನ್ನಿಂದ ಪಡೆದುಕೊಂಡಿರುತ್ತಾರೆ. ಹುಡುಗಾ ಹುಡುಗಿಯ ನಡುವೆಯ ಗಲಾಟೆಯಾದ ವಿಚಾರದಲ್ಲಿ ಸದರಿ ಸ್ಥಳದಲ್ಲಿ ನನ್ನ ಸಹಿ ಪಡೆದು

ಫೋಟೋ ತೆಗೆದಿರುತ್ತಾರೆ. ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಿದ್ದು, ಅದರ ಮೇಲೆ ಇರುವ ತನ್ನ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಯು ಸ್ಥಳ ಮಹಜರ್ ಆಗಿದ್ದು, ಅದನ್ನು ಈಗಾಗಲೇ ನಿ.ಪಿ.2 ಎಂದು ಗುರುತಿಸಲಾಗಿದ್ದು ಮತ್ತು ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿ.ಪಿ.2(ಸಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಸಹ ಸದರಿ ಮನೆಯ ಹತ್ತಿರ ಪೊಲೀಸರು ನನ್ನಿಂದ ಪಡೆದಿರುತ್ತಾರೆ ಮತ್ತು ಸದರಿ ಸ್ಥಳದಲ್ಲಿ ಫೋಟೋ ತೆಗೆದಿರುತ್ತಾರೆ. ಸಾಕ್ಷಿಗೆ ಈಗ ಒಂದು ಫೋಟೋವನ್ನು ತೋರಿಸಿದ್ದು, ಅದರಲ್ಲಿ ತನ್ನ ಇರುವಿಕೆ ಮತ್ತು ಪೊಲೀಸರ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಫೋಟೋವನ್ನು ಈಗಾಗಲೇ ನಿ.ಪಿ.3 ಎಂದು ಗುರುತಿಸಲಾಗಿರುತ್ತದೆ.

2. ಸಾಕ್ಷಿಗೆ ಇನ್ನೊಂದು ಫೋಟೋವನ್ನು ತೋರಿಸಿದ್ದು, ಅದರಲ್ಲಿ ತನ್ನ, ಪೊಲೀಸರ, ಡಿ ಸೋಜ ಮತ್ತು ರಾಜೇಗೌಡರ ಮಗಳು ಇರುವಿಕೆ ಬಗ್ಗೆ ಹೇಳಿರುತ್ತಾರೆ. ಸದರಿ ಫೋಟೋವನ್ನು ಈಗಾಗಲೇ ನಿ.ಪಿ.4 ಎಂದು ಗುರುತಿಸಲಾಗಿರುತ್ತದೆ. ಸದರಿ ಸ್ಥಳದಲ್ಲಿ ಪೊಲೀಸರು ನನ್ನ ಸಹಿಯನ್ನು ಪಡೆದಿದ್ದು ಯಾವ ವಿಚಾರಕ್ಕಾಗಿ ತೆಗೆದುಕೊಂಡಿರುತ್ತಾರೆ ನನಗೆ ಗೊತ್ತಿಲ್ಲ ಮತ್ತು ನಾನು ಸಹಿ ಮಾಡಿದ ದಾಖಲೆಯಲ್ಲಿ ಏನು ಬರೆದಿರುತ್ತದೆ ನನಗೆ ಗೊತ್ತಿಲ್ಲ. ನಾನು ನನ್ನ ಸಹಿ ಪಡೆದ ಸ್ಥಳದಲ್ಲಿ ಇದ್ದ ಮನೆ ಬಾಗಿಲು ಹಾಕಿತ್ತು. ಮನೆಯ ಮುಂಭಾಗದಲ್ಲಿ ಸದರಿ ಫೋಟೋವನ್ನು ತೆಗೆದು, ಸದರಿ ದಾಖಲೆಗೆ ನನ್ನ ಸಹಿ ಪಡೆದಿರುತ್ತಾರೆ. ಆಗ ಸಮಯ ಸಂಜೆ 7.00 ಗಂಟೆ ಆಗಿತ್ತು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲು ಮಾನ್ಯ ಅಭಿಯೋಜಕರಿಂದಃ-</u>

3. ನಿ.ಪಿ.16 ನೋಟೀಸ್ ನ್ನು ಫ್ರಾಸಾ.1 ಮತ್ತು ಆರೋಪಿತರ ನಡುವೆ ಆದ ಗಲಾಟೆಯ ವಿಚಾರದ ಬಗ್ಗೆ ಪೊಲೀಸರು ಸ್ಥಳಕ್ಕೆ ಬಂದಿದ್ದಾಗ ನೀಡಿರುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ ರಾಜೇಗೌಡರ ಮಗಳು ಸ್ಥಳಕ್ಕೆ ಬಂದು ಸ್ಥಳವನ್ನು ತೋರಿಸುವ ಸಮಯದಲ್ಲಿ ಸದರಿ ಮನೆಯು ಲಾಕ್ ಆಗಿದ್ದರಿಂದ ಮನೆಯ ಮುಂದೆನೇ ಸ್ಥಳ ತೋರಿಸಿದ್ದು ಅದರ ವಿಚಾರವಾಗಿ ಒಂದು ಬರವಣಿಗೆ ಮಾಡಿ ಅದಕ್ಕೆ ನನ್ನ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ಸರಿ. ಅದೇ ಸ್ಥಳದಲ್ಲಿ ಈಗ ತೋರಿಸುತ್ತಿರುವ ನಿ.ಪಿ.3 ಮತ್ತು 4 ಪೋಟೋಗಳನ್ನು ಅದೇ ವಿಚಾರವಾಗಿ ತೆಗೆದಿರುತ್ತಾರೆ ಎಂದರೆ ಸರಿ.

<u>ಪಾಟೀ ಸವಾಲು ಶ್ರೀ ಐ.ಎಸ್.ಟಿ. ವಕೀಲರಿಂದ – ಆರೋಪಿತರ ಪರವಾಗಿ</u>

4. ನಾನು ಮತ್ತು ಚಾಸಾ.10 ರಾಜೇಗೌಡರು ತುಂಬಾ ವರ್ಷಗಳಿಂದ ಪರಿಚಯಸ್ಥರು ಎಂದರೆ ಸರಿ. ನಾನು ರಾಜೇಗೌಡರ ತೋಟವನ್ನುಖ ಗುತ್ತಿಗೆ ಆಧಾರದಲ್ಲಿ ವ್ಯವಸಾಯ ಮಾಡುತ್ತಿದ್ದೆನು ಎಂದರೆ ಸರಿ. ನಾನು ಸಹಿ ಮಾಡಿದ ನಿ.ಪಿ.2 ಮಹಜರ್ ನಲ್ಲಿ ಏನು ಬರೆದುಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನಾವು ಸ್ಥಳಕ್ಕೆ ಹೋದಾಗ ಆರೋಪಿಗಳ ಮನೆಗೆ ಬೀಗ ಹಾಕಿದ ಬಗ್ಗೆ ನಾನು ಹೋಗಿ ಖುದ್ದಾಗಿ ನೋಡಿರುವುದಿಲ್ಲ, ಆದರೆ ಆ ಮನೆಯ ಬಾಗಿಲು

ಮುಚ್ಚಿತ್ತು. ನಾನು ನಿ.ಪಿ.2 ಮಹಜರ್ ಗೆ ಸಹಿ ಮಾಡಿದ್ದನ್ನು ಬಿಟ್ಟರೇ ಆ ದಿನ ಘಟನೆಯ ವಿಚಾರವಾಗಿ ನನಗೆ ಯಾವುದೇ ವಿಷಯ ಗೊತ್ತಿರಲಿಲ್ಲ ಎಂದರೆ ಸರಿ. ನಾನು ರಾಜೇಗೌಡರಿಗೆ ಪರಿಚಯ ಇದುದ್ದರಿಂದ ಅವರೇ ನನಗೆ ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳು ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ, ನಾನು ನ್ಯಾಯಾಲಯದಿಂದ ನೋಟೀಸು ಬಂದ ಮೇರೆಗೆ ನ್ಯಾಯಾಲಯಕ್ಕೆ ಬಂದಿರುತ್ತೇನೆ. ನಾನು ನಿ.ಪಿ.2 ಮಹಜರ್ ಗೆ ಸಹಿ ಮಾಡಿದ್ದು ಸುಳ್ಳು ಎಂದರೆ ಸರಿಯಲ್ಲ. ಅದೇ ರೀತಿ ಪೊಲೀಸರು ಸ್ಥಳದಲ್ಲಿ ಯಾವುದೇ ಬರವಣಿಗೆ ಮಾಡಿರುವುದಿಲ್ಲ ಎಂದರೆ ಸರಿ.

<u>ಮರುವಿಚಾರಣೆ - ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

Sd/-

(ಮಂಜುನಾಥ ಸಂಗ್ರೇಶಿ)

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಮಾ.